ಕರ್ನಾಟಕ ಸರ್ಕಾರ
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಶಿವಮೊಗ್ಗ ವೃತ್ತ,
ಹೊಳೆಹೊನ್ನೂರು ರಸ್ತೆ, ಸರ್ಕಾರಿ ಶ್ರೀಗಂಧದ ಕೋಠಿ ಆವರಣ, ವಿದ್ಯಾನಗರ, ಶಿವಮೊಗ್ಗ.
ದೂರವಾಣಿ:08182-240385 Email-ccfsmgt@gmail.com

ಕ್ರ: ಎ1-ಸಿಬ್ಬಂದಿ-ಆನೆಕವಾಡಿ-ನೇರನೇ-ಸಿಆರ್-02/2017-18. ದಿನಾಂಕ:26-04-2017.

## ಪತ್ರಿಕಾ ಪ್ರಕಟಣೆ

ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಶಿವಮೊಗ್ಗ ಅರಣ್ಯ ವೃತ್ತಕ್ಕೆ ಸಂಬಂಧಿಸಿದಂತೆ ಒಟ್ಟು 7 (ಏಳು) ಆನೆ ಕವಾಡಿಗಳ (ಬ್ಯಾಕ್‌ಲಾಗ್) ಹುದ್ದೆಗಳಿಗೆ ದಿನಾಂಕ:15-05-2017 ರಿಂದ 14-06-2017ರ ವರೆಗೆ ಅರ್ಜಿ ಆಹ್ವಾನಿಸಲಾಗಿದೆ. ಪೂರ್ಣ ಮಾಹಿತಿ ಇಲಾಖಾ ವೆಬ್‌ಸೈಟ್ www.kfdrecruitment.in ನಲ್ಲಿ ಹಾಗೂ ಈ ಕಚೇರಿಯಲ್ಲಿ ಲಭ್ಯವಿರುತ್ತದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಶಿವಮೊಗ್ಗ ವೃತ್ತ, ಶಿವಮೊಗ್ಗ.

A1-DCF.

ಕರ್ನಾಟಕ ಸರ್ಕಾರ
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಶಿವಮೊಗ್ಗ ವೃತ್ತ,
ಹೊಳೆಹೊನ್ನೂರು ರಸ್ತೆ, ಸರ್ಕಾರಿ ಶ್ರೀಗಂಧದ ಕೋಠಿ ಆವರಣ, ವಿದ್ಯಾನಗರ, ಶಿವಮೊಗ್ಗ.
ದೂರವಾಣಿ:08182-240385 Email-ccfsmgt@gmail.com

ಸಂ: ಎ1-ಸಿಬ್ಬಂದಿ-ಆನೆಕವಾಡಿ-ನೇರನೇ-ಸಿಆರ್-02/2017-18

ದಿನಾಂಕ:26-04-2017

## ಅಧಿಸೂಚನೆ

**ವಿಷಯ:** 07 ಆನೆ ಕಾವಾಡಿಗ (ಬ್ಯಾಕ್‌ಲಾಗ್) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು

**ಉಲ್ಲೇಖ:** ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮುಖ್ಯಸ್ಥರು, ಅರಣ್ಯ ಪಡೆ), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಬಿ3-ಸಿಬ್ಬಂದಿ-ಸಿಆರ್-140/2013-14 ದಿನಾಂಕ: 15-04-2017.

* * * * *

ಕರ್ನಾಟಕ ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ತಿದ್ದುಪಡಿ ನಿಯಮ 2008 ರಂತೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ-258-ಎಫ್‌ಎಸ್‌ಜಿ-2008 ದಿನಾಂಕ: 09-03-2009 ರಂತೆ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಅರಣ್ಯ ಇಲಾಖೆಯ ಶಿವಮೊಗ್ಗ ಅರಣ್ಯ ವೃತ್ತದಲ್ಲಿ ಒಟ್ಟು 07 (ಬ್ಯಾಕ್‌ಲಾಗ್) ಆನೆ ಕಾವಾಡಿಗ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಅರ್ಜಿಯನ್ನು ಮುದ್ದಾಂ ಮೂಲಕ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ಭರ್ತಿ ಮಾಡಿದ ಅರ್ಜಿಯನ್ನು **"ಆನೆ ಕವಾಡಿಗ ಹುದ್ದೆಗೆ ಅರ್ಜಿ"**ಎಂದು ಕವರಿನ ಮೇಲೆ ಬರೆದು **ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ವೃತ್ತ, ಶಿವಮೊಗ್ಗ** ಇಲ್ಲಿಗೆ **ದಿನಾಂಕ: 14-06-2017 ರ ಸಂಜೆ 5.30 ಗಂಟೆಗೆ** ಅಥವಾ ಅದಕ್ಕಿಂತ ಮುಂಚಿತವಾಗಿ ಸಲ್ಲಿಸುವುದು. ಅರ್ಜಿಗಳಿಗೆ ಯಾವುದೇ ತರಹದ ಸ್ವೀಕೃತಿ ಪತ್ರ ನೀಡಲಾಗುವುದಿಲ್ಲ. ಅರ್ಜಿ ನಮೂನೆ ಮಾದರಿ ಹಾಗೂ ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಹಾಗೂ ಕಛೇರಿಯ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗಿದೆ. ಅಂಚೆ ಮೂಲಕ ಅರ್ಜಿ ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿ ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ, ಆ ದಿನಾಂಕದ ಮಾರನೆ ಕೆಲಸದ ದಿನವು ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕವಾಗುತ್ತದೆ. **ಅರ್ಜಿ ಸಲ್ಲಿಸುವ ಅವಧಿ ದಿನಾಂಕ: 15-05-2017 ರಿಂದ 14-06-2017 ರ ಸಂಜೆ 5.30 ರ ವರೆಗೆ.**

1. **ಹುದ್ದೆಗಳ ವಿವರ:**

   **ಹುದ್ದೆಯ ಹೆಸರು:** ಆನೆ ಕಾವಾಡಿ

   **ವೇತನ ಶ್ರೇಣಿ:** 9600-200-12000-250-13000-300-14200-350-14550

**ವಿಭಾಗ:** ಶಿವಮೊಗ್ಗ ವನ್ಯಜೀವಿ ವಿಭಾಗ

2. **ಮೀಸಲಾತಿ ವರ್ಗೀಕರಣ:** ಬ್ಯಾಕ್‌ಲಾಗ್ ಹುದ್ದೆಗಳು

3. **ಮೀಸಲಾತಿ ವರ್ಗೀಕರಣ**

| ಪ್ರವರ್ಗ ನೇರ ಮೀಸಲಾತಿ (Vertical Reservation) | ಸಮತಳ ಮೀಸಲಾತಿ (Horizontal Reservation) | | | | | | ಒಟ್ಟು |
|---|---|---|---|---|---|---|---|
| | ಇತರೆ (ಸಾಮಾನ್ಯ) | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ | ನಿಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | |
| ಪರಿಶಿಷ್ಟ ಜಾತಿ | 1 | 1 | 1 | – | – | – | 3 |
| ಪ್ರವರ್ಗ-II (ಎ) | 1 | – | 1 | – | – | – | 2 |
| ಪ್ರವರ್ಗ-III (ಎ) | 1 | – | – | – | – | – | 1 |
| ಪ್ರವರ್ಗ-III (ಬಿ) | 1 | – | – | – | – | – | 1 |
| ಒಟ್ಟು | 4 | 1 | 2 | – | – | – | 7 |

